# ಭಾರತ ಸರ್ವೋಚ್ಚ ನ್ಯಾಯಾಲಯ

## ಕ್ರಿಮಿನಲ್ ಅಪೀಲು ಅಧಿಕಾರವ್ಯಾಪ್ತಿ

## ಕ್ರಿಮಿನಲ್ ಅಪೀಲು ಸಂಖ್ಯೆ: 664/2012

**ಎಮ್. ಅಬ್ಬಾಸ್ ಹಾಜಿ** **ಅಪೀಲುದಾರ(ರು)**

**ವಿರುದ್ಧ**

**ಟಿ.ಎನ್. ಚನ್ನಕೇಶವ** **ಪ್ರತಿವಾದಿ(ಗಳು)**

**ತೀರ್ಪು**

**ನ್ಯಾಯಮೂರ್ತಿ ದೀಪಕ್ ಗುಪ್ತಾ**

ಬದಲಿ ಅರ್ಜಿಯನ್ನು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಿಸಲಾಗಿದೆ. ಬದಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ, ವ್ಯವಹರಣೆ ಕೊನೆಗೊಳ್ಳುವುದನ್ನು ತಳ್ಳಿಹಾಕಲಾಗಿದೆ.

ದಿನಾಂಕ: 22.10.2008ರ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಈ ಅಪೀಲನ್ನು ನಿರ್ದೇಶಿಸಲಾಗಿದ್ದು, ಅದರಲ್ಲಿ ಉಚ್ಚ ನ್ಯಾಯಾಲಯವು ದೂರುದಾರನ ಅಪೀಲನ್ನು ಪುರಸ್ಕರಿಸಿ, ನಮ್ಮ ಮುಂದಿರುವ ಮೂಲ ಅರ್ಜಿದಾರನ (ಮೃತನಾಗಿರುವುದರಿಂದ) ದಾಖಲೆಯಲ್ಲಿರುವ ಕಾನೂನುಸಮ್ಮತ ಪ್ರತಿನಿಧಿಗಳು ವರ್ಗಾವಣೀಯ ಲಿಖಿತಪತ್ರಗಳ ಅಧಿನಿಯಮದ (ಇದರಲ್ಲಿ ಇನ್ನು ಮುಂದೆ "ಅಧಿನಿಯಮ" ಎಂದು ಉಲ್ಲೇಖಿಸಲಾಗುವುದು) 138ನೇ ಪ್ರಕರಣದ ಅಡಿಯಲ್ಲಿ ಅಪರಾಧ ನಿರ್ಣಯಕ್ಕೆ ಗುರಿಯಾಗಿದ್ದಾರೆಂದು ತೀರ್ಪು ನೀಡಿದೆ. ಆತನು, 5,10,000/– ರೂ.ಗಳ ಜುಲ್ಮಾನೆ ಸಂದಾಯ ಮಾಡುವ ಶಿಕ್ಷೆಗೆ ಗುರಿಯಾಗಿದ್ದು, ಅದಕ್ಕೆ ತಪ್ಪಿದಲ್ಲಿ ಒಂದು ವರ್ಷದ ಸಾದಾ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದನು.

ಇಂಥ ಮೊಕದ್ದಮೆಯಲ್ಲಿ, ಕಾನೂನುಸಮ್ಮತ ವಾರಸುದಾರರು ಜುಲ್ಮಾನೆ ಸಂದಾಯ ಮಾಡಲಾಗಲಿ ಅಥವಾ ಕಾರವಾಸ ಶಿಕ್ಷೆಗೆ ಒಳಗಾಗಲಾಗಲಿ ಗುರಿಯಾಗುವುದಿಲ್ಲ. ಆದಾಗ್ಯೂ, ಅವರು ತಮ್ಮ ಪೂರ್ವಾಧಿಕಾರಿಯು ಯಾವುದೇ ಅಪರಾಧದ ಅಪರಾಧಿಯಾಗಿರಲಿಲ್ಲವೆಂಬ ಉದ್ದೇಶಕ್ಕಾಗಿ ಮಾತ್ರ ತಮ್ಮ ಅಪರಾಧ ನಿರ್ಣಯವನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿದ್ದಾರೆ. ಆದುದರಿಂದ, ನಾವು ಈ ಅಪೀಲನ್ನು ಮುಂದುವರೆಸಲು ಕಾನೂನುಸಮ್ಮತ ವಾರಸುದಾರರು ಸಲ್ಲಿಸಿದ ಈ ಅರ್ಜಿಗೆ ಅವಕಾಶ ನೀಡಿದ್ದೇವೆ.

ದೂರುದಾರನು ಪ್ರತಿವಾದಿಸಿದ ಈ ಮೊಕದ್ದಮೆಯು, ಮೂಲ ಅಪೀಲುದಾರನು ತನ್ನಿಂದ 5 ಲಕ್ಷ ರೂಪಾಯಿಗಳನ್ನು ಎರವಲಾಗಿ ಪಡೆದಿದ್ದನು ಮತ್ತು ಆ ಮೊತ್ತದ ಮರು–ಸಂದಾಯಕ್ಕಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇದರಿಂದ ಪಡೆದ ದಿನಾಂಕ: 18.11.2000ದಂದು ಒಂದು ಚೆಕ್‌ಅನ್ನು ನೀಡಿದ್ದನು; ಚೆಕ್‌ಅನ್ನು ಹಾಜರುಪಡಿಸಿದಾಗ, ಸಾಕಷ್ಟು ಹಣವಿಲ್ಲವೆಂಬ ಕಾರಣಕ್ಕಾಗಿ ಅದನ್ನು ಅನಾದರಿಸಲಾಗಿತ್ತು; ತರುವಾಯ, ಕಾನೂನು ನೋಟೀಸನ್ನು (ನಿಶಾನೆ. ಪಿ4) ನೀಡಲಾಗಿದ್ದು, ಅದನ್ನು ಯುಕ್ತವಾಗಿ ಮೂಲ ಅಪೀಲುದಾರನಿಗೆ ಜಾರಿ ಮಾಡಲಾಗಿದೆ; ದೂರುದಾರನ ಪ್ರಕಾರ, ಸದರಿ ನೋಟೀಸಿಗೆ ಯಾವುದೇ ಉತ್ತರವನ್ನು ಸ್ವೀಕರಿಸಲಾಗಿಲ್ಲ ಮತ್ತು ಆ ಕಾರಣದಿಂದಾಗಿ ಒಂದು ಖಾಸಗಿ ದೂರನ್ನು ಸಲ್ಲಿಸಲಾಗಿತ್ತು; ಆರೋಪಿಯು ತಾನು ಚೆಕ್‌ಗೆ ಸಹಿ ಮಾಡಿರಲಿಲ್ಲವೆಂದು ಪ್ರತಿವಾದಿಸಿದ್ದಾನೆ ಎಂಬುದು ಮೊಕದ್ದಮೆಯಾಗಿದೆ. ವಿಚಾರಣೆ ಅವಧಿಯಲ್ಲಿ, ಮೂಲ ಅಪೀಲುದಾರನು ಚೆಕ್‌ನ್ನು ಪಡೆದು, ಒಪ್ಪಿತ ಸಹಿಗಳೊಂದಿಗೆ ಹೋಲಿಸಲು ಹಸ್ತಾಕ್ಷರ ತಜ್ಞರಿಗೆ ಕಳುಹಿಸಿದನು. ಹಸ್ತಾಕ್ಷರ ತಜ್ಞರಿಗೆ ಕಳುಹಿಸಿದ್ದ ಒಪ್ಪಿತ ಸಹಿಗಳು ಯಾವುವು ಎಂಬುದು ಸ್ಪಷ್ಟವಾಗಿರಲಿಲ್ಲವಾದರೂ, ಹಸ್ತಾಕ್ಷರ ತಜ್ಞರು ಚೆಕ್ ಮೇಲಿರುವ ಸಹಿಗಳು ಒಪ್ಪಿತ ಸಹಿಗಳನ್ನು ಬರೆದಿದ್ದ ವ್ಯಕ್ತಿಯದ್ದಲ್ಲವೆಂದು ಅಭಿಪ್ರಾಯಪಟ್ಟರು. ಚೆಕ್‌ನಲ್ಲಿರುವ ಸಹಿಗಳು ಮೂಲ ಅಪೀಲುದಾರನ ಸಹಿಗಳಾಗಿರಲಿಲ್ಲವೆಂಬುದು ಹಸ್ತಾಕ್ಷರ ತಜ್ಞನ ಅಭಿಪ್ರಾಯ ಎಂಬ ಕಾರಣದ ಮೇಲೆ ಮುಖ್ಯವಾಗಿ ವಿಚಾರಣಾ ನ್ಯಾಯಾಲಯವು ದೂರನ್ನು ವಜಾಗೊಳಿಸಿದೆ.

ದೂರುದಾರನು ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಿದ್ದು, ಎಲ್ಲಾ ಪುರಾವೆಗಳನ್ನು ಪರಿಗಣಿಸಿದ ನಂತರ ಅದು, ವಿಚಾರಣಾ ನ್ಯಾಯಾಲಯದ ತೀರ್ಪನ್ನು ಬದಲಿಸಿ ಸಕಾರಣಯುಕ್ತ ತೀರ್ಪನ್ನು ನೀಡಿದೆ. ಉಚ್ಚ ನ್ಯಾಯಾಲಯವು ವಿವೇಚಿಸಿದ ಕಾರಣಗಳೆಂದರೆ – (1) ಮೂಲ ಅಪೀಲುದಾರನು, ಚೆಕ್‌ಗೆ ತಾನು ಸಹಿ ಮಾಡಿಲ್ಲವೆಂದು ಹೇಳಲು ಸಾಕ್ಷಿ ಕಟಕಟೆ ಒಳಗೆ ಕಾಲಿಡಲಿಲ್ಲ; (2) ಹಸ್ತಾಕ್ಷರ ತಜ್ಞನ ಅಭಿಪ್ರಾಯವು, ಅಭಿಪ್ರಾಯ ಮಾತ್ರವಾಗಿದ್ದು ನಿರ್ಣಾಯಕವಲ್ಲ; (3) ದೂರುದಾರನು ತನಗೆ ಕಳುಹಿಸಿದ ನೋಟೀಸಿಗೆ ಉತ್ತರವನ್ನು ತಾನು ಕಳುಹಿಸಿದ್ದಾಗಿ ಸಾಬೀತುಪಡಿಸುವಲ್ಲಿ ಅಪೀಲುದಾರನು ವಿಫಲನಾಗಿರುವುದರಿಂದ, ಹಾಗೆಂದು ಕರೆಯಲಾದ ಉತ್ತರವನ್ನು ಸಾಕ್ಷ್ಯದಲ್ಲಿ ಗುರುತಿಸಲಾಗಿಲ್ಲ ಮತ್ತು ಅದರ ಅಂಚೆ ಸ್ವೀಕೃತಿಯನ್ನು ಸಹ ದಾಖಲೆಯಲ್ಲಿ ಇರಿಸಿರುವುದಿಲ್ಲ.

ಖುಲಾಸೆಗೊಳಿಸುವ ಆದೇಶವನ್ನು ತಳ್ಳಿಹಾಕಿ ಅಪೀಲು ನ್ಯಾಯಾಲಯವು, ಕ್ರಿಮಿನಲ್ ಮೊಕದ್ದಮೆಗಳ ಮೂಲಕ ಅಪೀಲು ನ್ಯಾಯಾಲಯವು ಬದ್ಧವಾಗಿರುವ ಪರಿಮಿತಿಗಳನ್ನು ದಾಟಿದೆ ಎಂಬುದು ನಮ್ಮ ಮುಂದಿರುವ ವಾದವಾಗಿದೆ. ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳು ಕ್ರಿಮಿನಲ್ ಸದೃಶ ವ್ಯವಹರಣೆಗಳಾಗಿವೆ. ಇತರ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಖುಲಾಸೆಗೊಳಿಸಲು ಅನ್ವಯಿಸುವ ತತ್ವಗಳನ್ನು ಈ ಮೊಕದ್ದಮೆಗಳಿಗೆ ಅನ್ವಯಿಸಲಾಗದು. ಪ್ರಸ್ತುತ ಮೊಕದ್ದಮೆಗೆ ಸಂಬಂಧಪಡುವಷ್ಟರಮಟ್ಟಿಗೆ, ಉಚ್ಚ ನ್ಯಾಯಾಲಯವು ನೀಡಿರುವ ಮೂರು ಕಾರಣಗಳ ಜೊತೆಗೆ, ಚೆಕ್ ಹಾಳೆಗಳು ದೂರುದಾರನ ಕೈಗೆ ಹೇಗೆ ತಲುಪಿದವು ಎಂಬುದನ್ನು ಸಹ ಮೂಲ ಅಪೀಲುದಾರನು ವಿವರಿಸಿರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ. ದೂರುದಾರನು ಮೂಲ ಅಪೀಲುದಾರನ ಕಚೇರಿಗೆ ಭೇಟಿ ನೀಡುತ್ತಿದ್ದುದರಿಂದ, ಆತನು ಅವುಗಳನ್ನು ಪಡೆದುಕೊಂಡಿದ್ದಾನೆ ಎಂಬುದಾಗಿ ದೂರುದಾರನ ಪಾಟಿ–ಸವಾಲಿನಲ್ಲಿ ಕೆಲವು ಸುಳಿವುಗಳನ್ನು ನೀಡಲಾಗಿದೆ ಎಂದು ವಾದಿಸಲಾಗಿದೆ. ಮೂಲ ಅಪೀಲುದಾರನ ಕಚೇರಿಗೆ ತಾನು ಕೇವಲ ಭೇಟಿ ನೀಡಿದುದಾಗಿ ದೂರುದಾರನು ಒಪ್ಪಿಕೊಂಡಿದ್ದಾನಾದರೂ, ಇತರ ಎಲ್ಲಾ ಸುಳಿವುಗಳನ್ನು ಅಲ್ಲಗಳೆದಿದ್ದಾನೆ. ಆ ತರುವಾಯ,

ಮೊಕದ್ದಮೆಯ ತನ್ನ ಭಾಗವನ್ನು ಸಾಬೀತುಪಡಿಸುವುದು ಅಪೀಲುದಾರನ ಕೆಲಸವಾಗಿತ್ತು. ಉಚ್ಚ ನ್ಯಾಯಾಲಯವು ಅದರ ಅಭಿಪ್ರಾಯದಲ್ಲಿ, ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ಮೂಲ ಅಪೀಲುದಾರನು ಅಪರಾಧಿ ಎಂದು ನಿರ್ಣಯಿಸುವಲ್ಲಿ ಸರಿ ಇದೆ.

ಅಪೀಲಿನಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಕಾರಣವು ನಮಗೆ ಕಂಡುಬರುತ್ತಿಲ್ಲ, ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ.

ಮೂಲ ಅಪೀಲುದಾರನು ಠೇವಣಿ ಮಾಡಿದ ಮೊತ್ತವನ್ನು, ಅದರ ಮೇಲೆ ಸಂಚಯವಾದ ಯಾವುದೇ ಬಡ್ಡಿ ಇದ್ದರೆ, ಅದರ ಸಮೇತವಾಗಿ ದೂರುದಾರನು ಪಡೆದುಕೊಳ್ಳಬಹುದಾಗಿದೆ.

.......................................ನ್ಯಾಯಮೂರ್ತಿ
(ದೀಪಕ್ ಗುಪ್ತಾ)

.......................................ನ್ಯಾಯಮೂರ್ತಿ
(ಅನಿರುದ್ಧ ಬೋಸ್)

ನವ ದೆಹಲಿ
19ನೇ ಸೆಪ್ಟಂಬರ್, 2019.

**ಕ್ಲೇಮು ನಿರಾಕರಣೆ**

**“**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ**”** ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**”**